ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:** ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿಜ್ಞಾನ ಸಂಯೋಜನೆ ವಿದ್ಯಾರ್ಥಿಗಳಿಗೆ ಸಿ.ಇ.ಟಿ ತರಬೇತಿಯ ಅಂತರ್ಗತ ತರಗತಿಗಳನ್ನು (Integrated Classes for Science Stream Students) ಪ್ರಾರಂಭಿಸಲು ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. 2026-27ನೇ ಸಾಲಿನ ಸಮಗ್ರ ಶಿಕ್ಷಣ ಕಾರ್ಯಕ್ರಮಗಳಿಗೆ ಪಿಎಬಿ (Project Approval Board)ನಲ್ಲಿ ಅನುಮೋದನೆ.
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ರವರ ಐಕ ಕಡತ ಸಂಖ್ಯೆಯ: (DPUE-ACA0OTH/354/2026, Comp.No.: 2241650) ಪ್ರಸ್ತಾವನೆ.

*****

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿ, 2026-27ನೇ ಸಾಲಿನ ಕೇಂದ್ರ ಸರ್ಕಾರದ ಪಿಎಬಿ (Project Approval Board) ಪಟ್ಟಿಯ ಕ್ರಮ ಸಂಖ್ಯೆ:2.3 Quality Interventions ಅಡಿಯಲ್ಲಿ, 2.3.1.1ನ ಉಪಚಟುವಟಿಕೆ 11ರಲ್ಲಿ ಪ್ರಸ್ತಾಪಿಸಿಲಾಗಿದ್ದ "Integrated Science Learning Enhancement Programme for Sr. Secondary (Science Stream) (C7208)" ಅನುಮೋದನೆ ನೀಡಲಾಗಿದೆ ಎಂದು ತಿಳಿಸಲಾಗಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿಜ್ಞಾನ ಸಂಯೋಜನೆ ವಿದ್ಯಾರ್ಥಿಗಳಿಗೆ ಸಿ.ಇ.ಟಿ ತರಬೇತಿಯ ಅಂತರ್ಗತ ತರಗತಿಗಳನ್ನು ಆರಂಭಿಸುವ ಕುರಿತು - (Integrated classes for Science Stream students) ಪ್ರಸ್ತಾವನೆಯನ್ನು ಇ-ಆಫೀಸ್ ಕಡತದ ಮೂಲಕ (DPUE-ACA0OTH/354/2026, Comp.No. : 2241650) ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ಯೋಜನೆಯ ವಿವರಗಳನ್ನು ಪ್ರಸ್ತಾಪಿಸಲಾಗಿದೆ.

2026-27ನೇ ಸಾಲಿಗೆ ಪಿಎಬಿ ಅನುಮೋದಿತ ಪಟ್ಟಿಯಲ್ಲಿರುವ Samagra Shikshana Karnataka (SSK) ಕಾರ್ಯಕ್ರಮಗಳನ್ನು ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಜಾರಿಗೊಳಿಸಬೇಕಾಗಿರುವುದಾಗಿ ತಿಳಿಸಿದ್ದು, ಈ ಸಂಬಂಧ ಪಿಎಬಿ ಪಟ್ಟಿಯ ಕ್ರಮ ಸಂಖ್ಯೆ:2.3 Quality Interventions ಅಡಿಯಲ್ಲಿ, 2.3.1.1ನ ಉಪಚಟುವಟಿಕೆ 11ರಲ್ಲಿ ಪ್ರಸ್ತಾಪಿಸಿಲಾದ "Integrated Science Learning Enhancement Programme for Sr. Secondary (Science Stream) (C7208)" ಅನುಮೋದನೆ ನೀಡಲಾಗಿದೆ ಎಂದು ತಿಳಿಸಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶ ಸುಧಾರಣೆಗೆ ಇಲಾಖೆಯು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ದಾಖಲಾತಿ ಹೆಚ್ಚಳಕ್ಕೂ ಸಹ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿರುವ ಜೊತೆಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಹಲವಾರು ಸುಧಾರಣೆಗಳನ್ನು ಆರಂಭಿಸಲಾಗಿದೆ ಎಂದು ತಿಳಿಸಿ, 2026-27 ನೇ ಸಾಲಿನಿಂದ ವಿಜ್ಞಾನ ಸಂಯೋಜನೆ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದರೊಂದಿಗೆ ಸಿ.ಇ.ಟಿ ಪ್ರವೇಶ ಪರೀಕ್ಷೆಗಳಿಗೂ ಸಹ ಸಜ್ಜುಗೊಳಿಸಲು ಉದ್ದೇಶಿಸಲಾಗಿದೆ ಎಂದು ಪ್ರಸ್ತಾಪಿಸಿರುತ್ತಾರೆ.

ರಾಜ್ಯದಲ್ಲಿ ವಿಜ್ಞಾನ ಸಂಯೋಜನೆ ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ, ಹೆಚ್ಚು ವಿದ್ಯಾರ್ಥಿಗಳಿರುವ 200 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪರಿಗಣಿಸಲಾಗಿದ್ದು,

45000 ವಿದ್ಯಾರ್ಥಿಗಳಿಗೆ ದಿನಕ್ಕೆ 1 ಗಂಟೆ 30 ನಿಮಿಷಗಳ ಭೌತಿಕ ತರಗತಿಗಳನ್ನು ಆಯೋಜಿಸಲು ಯೋಜನೆ ಸಿದ್ಧಪಡಿಸಲಾಗಿದೆ ಎಂದು ಸಹ ತಿಳಿಸಲಾಗಿದೆ.

ಒಟ್ಟಾರೆ 774 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೊದಲ 200 ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ನಡೆಸಲು ಆಯ್ಕೆ ಮಾಡಲಾಗಿದೆ. ಆ ಕಾಲೇಜುಗಳ ವಿಜ್ಞಾನ ವಿಭಾಗದ ಎಲ್ಲಾ ಸಂಯೋಜನೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಒಟ್ಟು ಅಂದಾಜು ಸಂಖ್ಯೆ 45000 ಇದ್ದು, ಇವರೆಲ್ಲರೂ ತರಬೇತಿಯ ಪ್ರಯೋಜನ ಪಡೆಯಲಿದ್ದಾರೆ, ಹಾಗೂ ಉಳಿದ 574 ಕಾಲೇಜುಗಳ ವಿದ್ಯಾರ್ಥಿಗಳು ಅದೇ ಸಮಯದಲ್ಲಿ PM e VIDYA ಯೋಜನೆಯಿಂದ ತರಗತಿಗಳನ್ನು ವೀಕ್ಷಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಹ ಪ್ರಸ್ತಾಪಿಸಲಾಗಿದ್ದು, ಭೌತಿಕ ತರಗತಿ ವಿಶೇಷತೆಗಳನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

**ಭೌತಿಕ ತರಗತಿಗಳ ವಿಶೇಷತೆಗಳು:**

a. ವಿದ್ಯಾರ್ಥಿಗಳಿಗೆ ನೀಡುವ Online ತರಗತಿಗಳ ಬದಲಿಗೆ ದೈನಂದಿನ ತರಗತಿಗಳ ಜೊತೆಯಲ್ಲಿ ತರಬೇತಿ ತರಗತಿಗಳನ್ನು ನಡೆಸಲಾಗುವುದು.
b. ಸದರಿ ತರಗತಿಗಳನ್ನು ಆಯಾ ಕಾಲೇಜಿನ ಉಪನ್ಯಾಸಕರೇ ಭೌತಿಕ ತರಗತಿಗಳನ್ನು ತೆಗೆದುಕೊಳ್ಳುವುದರಿಂದ ವಿದ್ಯಾರ್ಥಿಗಳು ಉಪನ್ಯಾಸಕರೊಂದಿಗೆ ಮುಕ್ತವಾಗಿ ಚರ್ಚಿಸಲು ಸಂವಾದ ನಡೆಸಲು ಹಾಗೂ ಸಂಶಯ ನಿವಾರಣೆಗೆ ಅವಕಾಶ ಲಭ್ಯವಾಗಲಿದೆ.
c. ಯಾವುದೇ ಅರ್ಥವಾಗದ ಅಂಶಗಳಿದ್ದಲ್ಲಿ ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಮತ್ತೊಮ್ಮೆ ತರಗತಿಗಳನ್ನು ನಡೆಸಬಹುದಾಗಿರುತ್ತದೆ.
d. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಆಧರಿಸಿ ಉಪನ್ಯಾಸಕರು ಸೂಕ್ತ ವಿವರಣೆ ಮತ್ತುವಿಧಾನವನ್ನು ಅಳವಡಿಸಿ ಕೊಳ್ಳಲಾಗುತ್ತದೆ.
e. ಆಯಾ ವಾರದಲ್ಲಿ ಪೂರ್ಣಗೊಂಡ ಪಠ್ಯಕ್ಕೆ ಸಂಬಂಧಿಸಿದಂತೆ ಬಹು ಆಯ್ಕೆ ಪ್ರಶ್ನೆಗಳನ್ನು ಬಿಡಿಸುವ ಕೌಶಲಗಳನ್ನು ಕಲಿಯಬಹುದಾಗಿರುತ್ತದೆ.
f. ಈ ತರಗತಿಗಳಿಂದ ವಿದ್ಯಾರ್ಥಿಗಳು ಸಿ.ಇ.ಟಿ ಪರೀಕ್ಷೆಗೆ ತರಬೇತಿ ಹೊಂದುವುದು ಅಲ್ಲದೇ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿನ ಮೊದಲ 20 ಅಂಕಗಳನ್ನು ಸಹ ಸುಲಭವಾಗಿ ಗಳಿಸಲು ಸಹಕಾರ ನೀಡುತ್ತದೆ.
g. ಯಾವುದೇ ತಾಂತ್ರಿಕ ಅಡಚಣೆಗಳಿರುವುದಿಲ್ಲ.
h. ವಾರಾಂತ್ಯದಲ್ಲಿ ಕಿರುಪರೀಕ್ಷೆಗಳನ್ನು ಹಾಗೂ ಮಾಸಾಂತ್ಯದಲ್ಲಿ ಮಾದರಿ ಪರೀಕ್ಷೆಗಳನ್ನು ನಡೆಸಲಾಗುವುದು. ಮತ್ತು ಆ ವಾರದಲ್ಲಿ ಪೂರ್ಣಗೊಳಿಸಿದ ಪಠ್ಯವನ್ನು ಆಧರಿಸಿ ಮಾದರಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ.
i. ಆಯಾ ವಾರದ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಮುಂದಿನ ವಾರದ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸುವಂತೆ ಪ್ರೇರೇಪಿಸುವ ಕಾರ್ಯವನ್ನು ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಮಾಡಬೇಕಾಗಿದೆ.
j. ತರಬೇತಿ ನೀಡುವ ಉಪನ್ಯಾಸಕರಿಗೆ ಈಗಾಗಲೇ ರಾಜ್ಯ ಹಾಗೂ ಜಿಲ್ಲಾ ಹಂತದಲ್ಲಿ ಡಿ.ಎಸ್.ಇ.ಆರ್.ಟಿ ಮತ್ತು ಡಯಟ್ ಗಳಲ್ಲಿ ತರಬೇತಿ ನೀಡಲಾಗಿದೆ.
k. ಇಲಾಖೆಯು ಈಗಾಗಲೇ ಕೆ.ಎಸ್.ಇ.ಎ.ಬಿಯ ಸಹಯೋಗದಿಂದ ಬೋಧನಾ ಸಂಪನ್ಮೂಲವನ್ನು ಪ್ರತಿ ವಿಷಯದಲ್ಲಿ ಪಠ್ಯವಾರು ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿದ್ದು, ಉಪನ್ಯಾಸಕರು ಸದರಿ ಪ್ರಶ್ನೆಕೋಠಿಯನ್ನು ಬಳಸಿಕೊಳ್ಳಲಾಗುವುದು.

**ಲಭ್ಯ ಅವಧಿಗಳು**: ಆಗಸ್ಟ್ ತಿಂಗಳಿನಿಂದ ತರಬೇತಿ ತರಗತಿಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದ್ದು, ಲಭ್ಯವಾಗುವ ತರಗತಿಗಳ ವಿವರ ಈ ಕೆಳಕಂಡಂತಿದೆ.

CRASH COURSE ನಡೆಸುವ ಸಂದರ್ಭದಲ್ಲಿ, ಪ್ರತಿ ದಿನದ ತರಗತಿಗೆ, ಒಂದು ತಂಡದಲ್ಲಿ 80 ವಿದ್ಯಾರ್ಥಿಗಳಂತೆ, ಒಟ್ಟಾರೆ 274 ತಂಡಗಳಾಗಲಿದ್ದು, ಒಟ್ಟಾರೆ 32880 ತರಗತಿಗಳನ್ನು ನಡೆಸಲಾಗುತ್ತದೆ ಎಂದು ತಿಳಿಸಿರುತ್ತಾರೆ. ಪ್ರತಿ ಒಂದು ಗಂಟೆಯ ಅವಧಿಗೆ ಉಪನ್ಯಾಸಕರಿಗೆ ಗೌರವ ಧನ ರೂ 400 ಎಂದು ಪರಿಗಣಿಸಿದಲ್ಲಿ ರೂ. 1,31,52,000/- ವೆಚ್ಚ ಆಗುವುದಾಗಿ ತಿಳಿಸಲಾಗಿದೆ.

ಮೇಲ್ಕಂಡ 02 ಹಂತದ ಈ ಕಾರ್ಯಕ್ರಮಕ್ಕೆ ಅಂದಾಜಿಸಿದ ಕ್ರೋಢಿಕೃತ ತಖ್ತೆ ಈ ಕೆಳಕಂಡಂತಿದೆ.

| Sl.No | Details | Amount (In Rs.) | Remarks |
|---|---|---|---|
| 1 | Integrated CET classes for Science students for the year 2026-27 REGULAR CLASS details | 2,18,48,400 | |
| 2 | Integrated CET classes for Science students for the year 2026-27 CRASH COURSE details | 1,31,52,000 | |
| 3 | Honorarium for College Principals, @ Rs 3000*6*200 | 36,00,000 | |
| | **TOTAL** | 3,86,00,400 | |
| 4 | Contingency / Unforeseen Expenditure | 8,09,600 | |
| | **Grand Total** | **3,94,10,000** | |

(Rs. Three Crore Ninety Four Lakhs and Ten Thousand only)

ಈ ಕಾರ್ಯಕ್ರಮವನ್ನು ಆಯ್ದ ಹೆಚ್ಚು ವಿಜ್ಞಾನ ಸಂಯೋಜನೆಯಲ್ಲಿ ದಾಖಲಾತಿ ಹೊಂದಿರುವ 200 ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿ, ಸದರಿ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಕಡತವನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಪರಿಶೀಲಿಸಿ , ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 54 ಇಜಿಒವಿ 2026, ಬೆಂಗಳೂರು,**
**ದಿನಾಂಕ: 29.08.2026**

ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ಇವರು ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2026-27ನೇ ಸಾಲಿನಿಂದ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಸಂಯೋಜನೆಯ ಪ್ರಥಮ ಪಿ.ಯು.ಸಿ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಿ.ಇ.ಟಿ ತರಬೇತಿಯ ಅಂತರ್ಗತ ತರಗತಿಗಳನ್ನು (Integrated Classes for Science Stream Students), 2026-27ನೇ ಸಾಲಿಗೆ ಪಿಎಬಿ (Project Approval Board) ಅನುಮೋದಿತ ಪಟ್ಟಿಯಲ್ಲಿರುವ ಸಮಗ್ರ ಶಿಕ್ಷಣ ಕರ್ನಾಟಕ (SSK) ಕಾರ್ಯಕ್ರಮದ ಪಿಎಬಿ ಪಟ್ಟಿಯ ಕ್ರಮ ಸಂಖ್ಯೆ:2.3 Quality Interventions ಅಡಿಯಲ್ಲಿ, 2.3.1.1ನ ಉಪಚಟುವಟಿಕೆ 11ರಲ್ಲಿ ಪ್ರಸ್ತಾಪಿಸಿಲಾದ "Integrated Science Learning Enhancement Programme for Sr. Secondary (Science Stream) (C7208) ಕಾರ್ಯಕ್ರಮದ ಅಡಿಯಲ್ಲಿ ರೂ. 3,94,10,000 (ಮೂರು ಕೋಟಿ ತೊಂಬತ್ತ ನಾಲ್ಕು ಲಕ್ಷದ ಹತ್ತು ಸಾವಿರ ರೂಪಾಯಿಗಳು) ಮೊತ್ತಕ್ಕೆ ಅನುಮೋದನೆಯಾಗಿರುವಂತೆ ಸೆಪ್ಟೆಂಬರ್ – 2026 ರಿಂದ ಜನವರಿ – 2027ರವರೆಗೆ ಈ ಕೆಳಕಂಡ ವಿವರಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿಸಿ ಆದೇಶಿಸಿದೆ.

| Sl.No | Details | Amount (In Rs.) |
|---|---|---|
| 1 | Integrated CET classes for Science students for the year 2026-27 REGULAR CLASS details | 2,18,48,400 |
| 2 | Integrated CET classes for Science students for the year 2026-27 CRASH COURSE details | 1,31,52,000 |
| 3 | Honorarium for College Principals, @ Rs 3000*6*200 | 36,00,000 |
| | **TOTAL** | 3,86,00,400 |
| 4 | Contingency / Unforeseen Expenditure | 8,09,600 |
| | **Grand Total** | **3,94,10,000** |

(Rs. Three Crore Ninety Four Lakhs and Ten Thousand only)

**ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ಹಾಗೂ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರು ಪಾಲಿಸಬೇಕಾದ ಷರತ್ತುಗಳು ಹಾಗೂ ನಿಬಂಧನೆಗಳು:-**

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಇವರು ಸದರಿ ಕಾರ್ಯಕ್ರಮದ ಅನುಷ್ಠಾನಾಧಿಕಾರಿಗಳಾಗಿ ಕಾರ್ಯನಿರ್ವಹಿಸತಕ್ಕದ್ದು.
2. ಕಾರ್ಯಕ್ರಮದ ಅನುಷ್ಠಾನಕ್ಕೆ ಸಮಗ್ರ ಶಿಕ್ಷಣ ಕರ್ನಾಟಕ (SSK) ಕಾರ್ಯಕ್ರಮದ ಪಿಎಬಿ ಪಟ್ಟಿಯ ಕ್ರಮ ಸಂಖ್ಯೆ:2.3 Quality Interventions ಅಡಿಯಲ್ಲಿ, 2.3.1.1ನ ಉಪಚಟುವಟಿಕೆ 11ರಲ್ಲಿ ಪ್ರಸ್ತಾಪಿಸಿಲಾದ "Integrated Science Learning Enhancement Programme for Sr. Secondary (Science Stream) (C7208) ಕಾರ್ಯಕ್ರಮದ ಅಡಿಯಲ್ಲಿ ರೂ. 3,94,10,000 (ಮೂರು ಕೋಟಿ ತೊಂಬತ್ತ ನಾಲ್ಕು ಲಕ್ಷದ ಹತ್ತು ಸಾವಿರ ರೂಪಾಯಿಗಳು) ಮೊತ್ತವನ್ನು ಮಾತ್ರ ಬಳಸತಕ್ಕದ್ದು, ಉಳಿದಂತೆ ಈ ಕಾರ್ಯಕ್ರಮಕ್ಕೆ ಸರ್ಕಾರದಿಂದ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.
3. ರಾಜ್ಯದ ಮಹತ್ವಾಕಾಂಕ್ಷಿ ಶಾಲೆಗಳಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮವಹಿಸತಕ್ಕದ್ದು.
4. ಒದಗಿಸಲಾದ ಅನುದಾನಕ್ಕೆ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಇವರು ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಕ್ಕದ್ದು.
5. ವಿದ್ಯಾರ್ಥಿಗಳ ಹಾಜರಾತಿ, ಕಲಿಕಾ ಪ್ರಗತಿ ಹಾಗೂ ಸಾಧನೆಯನ್ನು ದಾಖಲಿಸಿ ಮಾಸಿಕವಾಗಿ ಪರಿಶೀಲಿಸತಕ್ಕದ್ದು.
6. ಅವಧಿ ಮಧ್ಯೆ ಪೂರ್ವಪರೀಕ್ಷೆ (Pre-Test), ಮಧ್ಯಂತರ ಮೌಲ್ಯಮಾಪನ ಹಾಗೂ ಅಂತಿಮ ಮೌಲ್ಯಮಾಪನ (Post-Test) ನಡೆಸಿ ಕಲಿಕಾ ಫಲಿತಾಂಶಗಳನ್ನು ದಾಖಲಿಸತಕ್ಕದ್ದು.
7. ಕಾರ್ಯಕ್ರಮದ ಅನುಷ್ಠಾನವನ್ನು ಸಂಬಂಧಿಸಿದ ಉಪನಿರ್ದೇಶಕರು, ಜಿಲ್ಲಾ ಉಪನಿರ್ದೇಶಕರು ಹಾಗೂ ಕಾಲೇಜಿನ ಪ್ರಾಂಶುಪಾಲರು ನಿಯಮಿತವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು.
8. ಅನಿರೀಕ್ಷಿತ ವೆಚ್ಚ (Contingency Expenditure) ಸೇರಿದಂತೆ ಯಾವುದೇ ವೆಚ್ಚವನ್ನು ಸಂಬಂಧಿತ ನಿಯಮಗಳಿಗೆ ಅನುಗುಣವಾಗಿ ಮಾತ್ರ ಭರಿಸತಕ್ಕದ್ದು.
9. ಯಾವುದೇ ಉಪಕರಣ, ಪ್ರಯೋಗಾಲಯ ಸಾಮಗ್ರಿ, ಸಾಫ್ಟ್‌ವೇರ್ ಅಥವಾ ಸೇವೆಗಳ ಖರೀದಿಯನ್ನು ಸರ್ಕಾರದ ಪ್ರಚಲಿತ ಸಾರ್ವಜನಿಕ ಸಂಗ್ರಹಣೆ ವಿಧಾನಗಳ ಮೂಲಕ ಮಾತ್ರ ಕೈಗೊಳ್ಳತಕ್ಕದ್ದು.

| | | | |
|---|---|---|---|
| 5 | Number of days | 68 | - |
| 6 | Number of Batches (80 students in each batch) | 612 | - |
| 7 | Faculty required for each batch | 4 | - |
| 8 | Number **hours** available for both first and second year classes are (Number of Batches*days*1.5 hours) | 62424 | - |
| 9 | **Financial Exp: For each class Rs 350/- is considered as Remuneration for faculty** | | **2,18,48,400** |
| | **Note: The financial incentive is worked out only for physical classes conducted in 200 colleges for around 45000 students** | | |

ಮೇಲ್ಕಂಡ ಕೋಷ್ಟಕದಂತೆ, ಪ್ರತಿ ದೈನಂದಿನ ತರಗತಿಗೆ, ಒಂದು ತಂಡದಲ್ಲಿ 80 ವಿದ್ಯಾರ್ಥಿಗಳಂತೆ, ಒಟ್ಟಾರೆ 612 ತಂಡಗಳಾಗಲಿದ್ದು, ಒಟ್ಟಾರೆ 62424 ಗಂಟೆಗಳ ತರಗತಿಗಳನ್ನು ನಡೆಸಲಾಗುವುದಾಗಿ ತಿಳಿಸಿದ್ದು, ಪ್ರತಿ 1 ಗಂಟೆಯ ಅವಧಿಗೆ ಉಪನ್ಯಾಸಕರಿಗೆ ಗೌರವ ಧನ ರೂ.350 ಎಂದು ಪರಿಗಣಿಸಿದಲ್ಲಿ ರೂ.2,18,48,400/- ವೆಚ್ಚ ಆಗುತ್ತವೆ ಎಂದು ತಿಳಿಸಲಾಗಿದೆ.

ಮುಂದುವರೆದು, ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ, ವಾರ್ಷಿಕ ಪರೀಕ್ಷೆಯ ನಂತರ ಹಾಗೂ ಸಿ.ಇ.ಟಿ ಪರೀಕ್ಷೆಗಳ ನಡುವೆ ಲಭ್ಯವಾಗುವ 20 ದಿನಗಳಲ್ಲಿ ಪ್ರತಿ ದಿನ 1.5 ಗಂಟೆಯ 4 ಅವಧಿಗಳಂತೆ ಪ್ರತಿ ದಿನ 6 ಗಂಟೆ ಅವಧಿಯ ತರಗತಿಗಳನ್ನು ನಡೆಸಲು ಉದ್ದೇಶಿಸಲಾಗಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ.

ವೆಚ್ಚದ ವಿವರ ಈ ಕೆಳಕಂಡಂತಿದೆ.

**Table: 2**

**Integrated CET classes for II PUC Science students for the year 2026-27 CRASH COURSE details**

| Sl No | Particulars/Details | Number | Amount Rs |
|---|---|---|---|
| 1 | Physical classes in colleges | 200 | - |
| 2 | Number of students in physical classes | 20000 | - |
| 3 | Number of days | 20 | - |
| 4 | Number of Hours per day | 6 | - |
| 5 | Number of Batches (80 students in each batch) | 274 | - |
| 6 | Faculty required for each batch | 4 | - |
| 7 | The teaching hours, for Each faculty | 30 | - |
| 8 | Number **hours** available for both first and second year classes are (Number of Batches*days*1.5*4=6hours) | 32880 | - |
| 9 | **Financial Exp: For each class Rs 400/- is considered as Remuneration for faculty** | | **1,31,52,000** |

10. ಕಾರ್ಯಕ್ರಮದ ಅನುಷ್ಠಾನದ ವೇಳಾಪಟ್ಟಿಯನ್ನು ಸೆಪ್ಟೆಂಬರ್ - 2026 ರಿಂದ ಜನವರಿ - 2027ರವರೆಗೆ ಪರಿಷ್ಕರಿಸಿ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
11. ಸದರಿ ಕಾರ್ಯಕ್ರಮದ ಅನುಷ್ಠಾನ ವೆಚ್ಚಗಳಲ್ಲಿ, ವೇತನ/ಗೌರವಧನ ಪಾವತಿ ಸೇರಿದಂತೆ, ಯಾವುದೇ ರೀತಿಯ ಪುನರಾವರ್ತನೆ (Duplication) ಉಂಟಾಗದಂತೆ ನೋಡಿಕೊಳ್ಳತಕ್ಕದ್ದು.
12. ಎಲ್ಲಾ ಗೌರವಧನ/ಯಾವುದೇ ರೀತಿಯ ಸಂಭಾವನೆ ಪಾವತಿಗಳನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪೂರ್ವಾನುಮೋದನೆಯೊಂದಿಗೆ, ಅನುಮೋದಿತ ಮೊತ್ತವನ್ನು ರಾಜ್ಯ ಖಜಾನೆ ಪೋರ್ಟಲ್ ಮೂಲಕ ನೇರ ಲಾಭ ವರ್ಗಾವಣೆ (DBT) ವ್ಯವಸ್ಥೆಯಡಿ ಸಂಬಂಧಿತ ಉಪನ್ಯಾಸಕರು/ಪ್ರಾಂಶುಪಾಲರ ಆಧಾರ್‌ಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಮಾತ್ರ ಪಾವತಿಸತಕ್ಕದ್ದು.
13. ಈ ಕಾರ್ಯಕ್ರಮದ ಆದೇಶದ ಪ್ರತಿಯನ್ನು ಇಲಾಖೆಯ ಜಾಲತಾಣದಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.
14. ಇಲಾಖೆಯು ಕಾಲಕಾಲಕ್ಕೆ ನೀಡುವ ಹೆಚ್ಚುವರಿ ನಿರ್ದೇಶನಗಳು, ಪರಿಷ್ಕೃತ ಮಾರ್ಗಸೂಚಿಗಳು ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
15. ಕಾರ್ಯಕ್ರಮದ ಫಲಿತಾಂಶ, ವಿದ್ಯಾರ್ಥಿಗಳ ಸಾಧನೆ ಹಾಗೂ ಅನುಷ್ಠಾನದ ವಿವರಗಳ ಕುರಿತು ಮಾಸಿಕ ಹಾಗೂ ತ್ರೈಮಾಸಿಕ ವರದಿಗಳನ್ನು ಇಲಾಖೆಗೆ ಸಲ್ಲಿಸತಕ್ಕದ್ದು.
16. ಮೇಲ್ಕಂಡ ಕಾರ್ಯಕ್ರಮದ ಶೀಘ್ರ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ನಿಗದಿಪಡಿಸತಕ್ಕದ್ದು ಹಾಗೂ ಅದರನ್ವಯ ಭರಿಸಲಾಗುವ ವೆಚ್ಚದ ವಿವರವನ್ನು ಪ್ರತಿ ಮಾಹೆ ಹೊಸ ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 04 ಟಿಎಫ್‌ಪಿ 2026, ದಿನಾಂಕ: 29.06.2026ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

29/08/26

**(ಶುಭಮಂಗಳ .ಆರ್.ವಿ)**
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಇವರಿಗೆ:**

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು-01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮಲ್ಲೇಶ್ವರಂ, ಬೆಂಗಳೂರು.
6. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ.
7. ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

10. ಕಾರ್ಯಕ್ರಮದ ಅನುಷ್ಠಾನದ ವೇಳಾಪಟ್ಟಿಯನ್ನು ಸೆಪ್ಟೆಂಬರ್ - 2026 ರಿಂದ ಜನವರಿ - 2027ರವರೆಗೆ ಪರಿಷ್ಕರಿಸಿ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
11. ಸದರಿ ಕಾರ್ಯಕ್ರಮದ ಅನುಷ್ಠಾನ ವೆಚ್ಚಗಳಲ್ಲಿ, ವೇತನ/ಗೌರವಧನ ಪಾವತಿ ಸೇರಿದಂತೆ, ಯಾವುದೇ ರೀತಿಯ ಪುನರಾವರ್ತನೆ (Duplication) ಉಂಟಾಗದಂತೆ ನೋಡಿಕೊಳ್ಳತಕ್ಕದ್ದು.
12. ಎಲ್ಲಾ ಗೌರವಧನ/ಯಾವುದೇ ರೀತಿಯ ಸಂಭಾವನೆ ಪಾವತಿಗಳನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪೂರ್ವಾನುಮೋದನೆಯೊಂದಿಗೆ, ಅನುಮೋದಿತ ಮೊತ್ತವನ್ನು ರಾಜ್ಯ ಖಜಾನೆ ಪೋರ್ಟಲ್ ಮೂಲಕ ನೇರ ಲಾಭ ವರ್ಗಾವಣೆ (DBT) ವ್ಯವಸ್ಥೆಯಡಿ ಸಂಬಂಧಿತ ಉಪನ್ಯಾಸಕರು/ಪ್ರಾಂಶುಪಾಲರ ಆಧಾರ್‌ಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಮಾತ್ರ ಪಾವತಿಸತಕ್ಕದ್ದು.
13. ಈ ಕಾರ್ಯಕ್ರಮದ ಆದೇಶದ ಪ್ರತಿಯನ್ನು ಇಲಾಖೆಯ ಜಾಲತಾಣದಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.
14. ಇಲಾಖೆಯು ಕಾಲಕಾಲಕ್ಕೆ ನೀಡುವ ಹೆಚ್ಚುವರಿ ನಿರ್ದೇಶನಗಳು, ಪರಿಷ್ಕೃತ ಮಾರ್ಗಸೂಚಿಗಳು ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
15. ಕಾರ್ಯಕ್ರಮದ ಫಲಿತಾಂಶ, ವಿದ್ಯಾರ್ಥಿಗಳ ಸಾಧನೆ ಹಾಗೂ ಅನುಷ್ಠಾನದ ವಿವರಗಳ ಕುರಿತು ಮಾಸಿಕ ಹಾಗೂ ತ್ರೈಮಾಸಿಕ ವರದಿಗಳನ್ನು ಇಲಾಖೆಗೆ ಸಲ್ಲಿಸತಕ್ಕದ್ದು.
16. ಮೇಲ್ಕಂಡ ಕಾರ್ಯಕ್ರಮದ ಶೀಘ್ರ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ನಿಗದಿಪಡಿಸತಕ್ಕದ್ದು ಹಾಗೂ ಅದರನ್ವಯ ಭರಿಸಲಾಗುವ ವೆಚ್ಚದ ವಿವರವನ್ನು ಪ್ರತಿ ಮಾಹೆ ಹೊಸ ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 04 ಟಿಎಫ್‌ಪಿ 2026, ದಿನಾಂಕ: 29.06.2026ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

29/08/26

**(ಶುಭಮಂಗಳ .ಆರ್.ವಿ)**
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಇವರಿಗೆ:**

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು-01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮಲ್ಲೇಶ್ವರಂ, ಬೆಂಗಳೂರು.
6. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ.
7. ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು